


ಮೈಯ ಒಂದು ಅಂಗವೇ ಕತ್ತರಿಸಿ ಹೋದಂತೆ ರೋದನ
ಮರಳಿ ಪಡೆವ ಹುಸಿ ಮಮಕಾರ
ಗುಲಾಬಿಗೆ ಗೊತ್ತಿಲ್ಲವೆ ತಾನು ಮಲ್ಲಿಗೆ ಅಲ್ಲವೆಂದು
ಇದಕೆ ಗೊತ್ತಿಲ್ಲವೆ
ತಾನು ಜಾಜಿಯಲ್ಲವೆಂದು
ಮತ್ತು ಕಂಡಿದೆ
ತನ್ನಿರುವಿನ ನೆರಳು ಮತ್ತೊಂದರಲ್ಲಿರುವುದನು
ಸೃಷ್ಟಿಯಲಿ ಇಲ್ಲ ಭೇದ ಜೀವಜಡದ ನಡುವೆ
ಆದರೂ ಭೇದ ಎಳೆದು ಗೆರೆ
ಇರುವುದ ಇರಗೊಡದೆ

ದಿಟ ಹುಸಿಯಲ್ಲ
ಆದರೆ



ದಿಟವಾಗಿಸಲಾಗುತಿದೆ ಅದ
ದಿಟ ಹುಸಿಯಾಗುವುದು ಹುಸಿ
ದಿಟ ದಿಟ್ಟ
ಆಗದು ಹುಸಿ

ಇರಬೇಕು ಇರುವಲ್ಲಿ
ಸುಟ್ಟು ಬೂದಿಯಾಗುವ ಸೂರ್ಯನಂತೆ
ಕಳೆದು ಹೋಗಬೇಕು ಅದರ ಕಿರಣಗಳಂತೆ
ಇಲ್ಲಿರುವುದು ಎಲ್ಲೆಡೆಯೂ ಇರುವುದು
ಇರಬೇಕು ಇರುವಲ್ಲಿ
ಇರುವಲ್ಲೆ ಇದೆ ಇದ್ದದ್ದು ಇರುವುದು
ಇಲ್ಲದೆನ್ನುವುದಿಲ್ಲ ಇರುವುದು ಎಲ್ಲ
ಇಲ್ಲದಂತೆ
ರೂಹಿಲ್ಲದೆ

ಈ ಕಾವ್ಯರೂಪಕದ ಪಯಣ ಮುಂದಿನ
ಸಂಚಿಕೆಯಲ್ಲಿ ಮತ್ತೊಬ್ಬ ಕವಿಯೊಂದಿಗೆ
ಮುಂದುವರೆಯುವುದು.